ಖಗಮೃಗಗಳಂ ಕಂಡು ನುಡಿಸುತಿರ್ದ ಪ್ರಸ್ತಾವದ ವಚನ: ಅಳಿ ಸಂಕುಳವೆ, ಮಾಮರವೇ, ಬೆಳುದಿಂಗಳೇ... ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ ॥ ೫೩ ॥; ಮತ್ತಂ, ಚಿಲಿಮಿಲಿ ಎಂದೋದುವ ಗಿಳಿಗಳಿರಾ... ಹೇಳಿರೇ ॥ ೫೪ ॥" (ಜಿ. ವಿ. ಜಯಾ ರಾಜಶೇಖರ್, *ಗೂಳೂರು ಸಿದ್ಧವೀರಣ್ಣೊಡೆಯ ವಿರಚಿತ ಪ್ರಭುದೇವರ ಶೂನ್ಯಸಂಪಾದನೆಯ ಸಂಗ್ರಹ*, ಪುಟ ೧೫೩; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೮).

ಇಲ್ಲಿ ಅವಳು ಹೊಕ್ಕಿದ್ದು ಕದಳಿಯ ಕಾಡಿಗೆ. ಅಕ್ಕನ ಕದಳಿಯನ್ನು ಒಂದು ಸಂಕೇತವಾಗಿ ನಾವು ತೆಗೆದುಕೊಳ್ಳುವುದರಲ್ಲಿ ನಮಗೆ ಸಾರ್ವಕಾಲಿಕ ಅನುಕೂಲವಿದೆ. ಆ ಕಾನನ, ತನು ಮನ ವಿಷಯ ಸಂಕುಳದ, ನೋವು ನಲಿವಿನ ಭಾವನೆಗಳ ತಿಕ್ಕಾಟದ ಘೋರ ಅಡವಿ, ಬರಿಯ ಬಾಳೆಯ ವನವಲ್ಲ. ಅವಳೇ ಹೇಳಿಲ್ಲವೇ? "ಕರ್ಮವೆಂಬ ಕದಳಿ ಎನಗೆ, ಕಾಯವೆಂಬ ಕದಳಿ ನಿಮಗೆ. ಮಾಟವೆಂಬ ಕದಳಿ ಬಸವಣ್ಣಂಗೆ. ಭಾವವೆಂಬ ಕದಳಿ ಚೆನ್ನಬಸವಣ್ಣಂಗೆ. ಬಂದ ಬಂದ ಸೆಲೆ ಸಂದಿತ್ತು. ಎನ್ನಂಗದವಸಾನ ಹೇಳಾ ಚೆನ್ನಮಲ್ಲಿಕಾರ್ಜುನ." ಬಾಳೇ ಒಂದು ಬಾಳೆಯ ದಟ್ಟ ಕಾಡಾಗಿ ಕಾಣುತ್ತಿದೆ, ಇಂತಹದರೊಳಗೆ ಹೊಕ್ಕ ಅಕ್ಕ ಹುಡುಕುತ್ತಿದ್ದಾಳೆ, ಇಲ್ಲ, ನಮಗೂ ಹುಡುಕಲು ಸೂಚನೆ ಕೊಡುತ್ತಿದ್ದಾಳೆ.

* * * * *

ಪ್ರಕೃತಿಯೇ ದೇವರು ಎಂದು ಕೆಲವರು ಬಗೆವುದುಂಟು. ಇದಕ್ಕೆ ಒಂದು ಸಣ್ಣ ಉದಾಹರಣೆ ಮತ್ತು ಸಮರ್ಥನೆ: ಸೂರ್ಯನನ್ನು ದೇವರೆಂದು ಒಪ್ಪಿಕೊಳ್ಳಲು ಯಾರಿಗೆ ಏನುತಾನೇ ಕಷ್ಟ? ಹಾಗೆಯೇ ಇಲ್ಲಿ, ಆ ಅನಿಕೇತನ ಚೈತನ್ಯನು ಕುಡಿ ಗಿಡ ಮರ ಬಳ್ಳಿ ಪಶು ಪಕ್ಷಿಗಳೊಳಗೂ ಇಹನೆಂಬ ಭಾವನೆ, ಸೌಂದರ್ಯರೂಪೀ ಶಿವ ಅವುಗಳಿಗೆ ಮಾತ್ರ ಗೋಚರನೆಂಬ ವಿಶ್ವಾಸ ಮತ್ತು ತನಗೇಕೆ ಅವನು ಕಾಣುತ್ತಿಲ್ಲ ಎಂಬ ಕೊರಗು ಅಕ್ಕನದು ಎಂದೂ ಕೆಲವು ವಿಮರ್ಶಕರು ಈ ವಚನಕ್ಕೆ ಅರ್ಥೈಸಿರುವುದು ಉಂಟು. ತನ್ನ ಜೀವನವನ್ನೇ ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ ಹಾಗೂ ಪರಮಾರ್ಥ ಸಾಧನೆಯ ಪ್ರತೀಕಗೊಳಿಸಿಕೊಂಡ ಅಕ್ಕ, ಅಂಗಲಾಚಿ ಕಾಡಿನಲ್ಲಿ ಹೀಗೆ ತೊಳಲಾಡುತ್ತಿದ್ದಾಳೆ : "ಗಿಳಿ ಕೋಗಿಲೆ ಭೃಂಗ ಹಂಸ ನವಿಲು ಸಂತೋಷದಿಂದ ಗೀತೆಗಳನ್ನು ಹಾಡುತ್ತ ಕುಣಿಯುತ್ತ ಆಡುತ್ತ ನಲಿಯುತ್ತ ಸಂಭ್ರಮಗೊಳ್ಳುತ್ತ ಆ ಭಗವಂತನನ್ನು ಕಾಣುತ್ತಿವೆಯಲ್ಲ! ಅರಣ್ಯದ [ಪಶು] ಪಕ್ಷಿಗಳಿಗೆಲ್ಲ ಗೋಚರನಾಗಿ ನನಗೆ ಮಾತ್ರ ಅಗೋಚರನಾಗಿ ಕೀಟಲೆಗೊಳಿಸುತ್ತಿರುವುದು ನ್ಯಾಯವೇ ಚೆನ್ನಮಲ್ಲಿಕಾರ್ಜುನ?" ಎನ್ನುತ್ತಿದ್ದಾಳೆ ಎಂದು ಬರೆಯುತ್ತಾರೆ, ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು (*ವಚನ ಧರ್ಮಸಾರ*, ಪುಟ ೭೮; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩).

ಶಿವಶರಣರ ವಚನಗಳನ್ನು ಸಮರ್ಥವಾಗಿ ಇಂಗ್ಲೀಷಿಗೆ ಅನುವಾದಿಸಿದ ದಿವಂಗತ ಎ. ಕೆ. ರಾಮಾನುಜನ್ ಸಹ ಶರಣರ ಈ ಚೆನ್ನುಡಿಗಳಲ್ಲಿ, ನಂಬಿದ ದೇವರ ಆರಾಧನೆಗೆ 'ಮಾಡುವುದು ಮತ್ತು ಆಗುವುದು' (*Making & Being* ) ಇವುಗಳ ವ್ಯತ್ಯಾಸದ ಮಹತ್ವವನ್ನು ಪ್ರಸ್ತಾಪಿಸುತ್ತಾರೆ (ನೋಡಿ: ಎ. ಕೆ. ರಾಮಾನುಜನ್, *Speaking of Shiva*, ಪುಟ ೨೦; Penguin Classics, New York ೧೯೭೩).

ನನ್ನ ಚೆನ್ನಮಲ್ಲಿಕಾರ್ಜುನ ('My Lord, White as Jasmine') ಎಲ್ಲಿದ್ದಾನೆ ಎಂಬುದು ನಿಮಗೆ ಗೊತ್ತಿದ್ದರೆ ನನಗೆ ಹೇಳಿ (Tell me if you know where he is) ಎಂದು ಕೊನೆಗೊಳ್ಳುವ ಈ ವಚನದ ಅವರ ಅನುವಾದದಲ್ಲಿ, ಗಿಳಿ ಹಂಸೆ ಕೋಗಿಲೆ ದುಂಬಿ ನವಿಲುಗಳನ್ನು ಅಕ್ಕ ಕೇಳುವುದು– "ನಿಮಗೆ ಗೊತ್ತಿಲ್ಲವೇ? "ನಿಮಗೆ ಗೊತ್ತಿಲ್ಲವೇ? (Don't you know? don't you know?) ಎಂದು. 'ಗೊತ್ತೇ?' ಎಂದಾಗಿನ ಅರಿವಿನ, ಕಾಣ್ಕೆಯ, ದರ್ಶನದ ಭಾವವನ್ನು ರಾಮಾನುಜನ್ ಚೆನ್ನಾಗಿ ಗ್ರಹಿಸುತ್ತಾರೆ (ಮೇಲೆ ಹೇಳಿದ ಪುಸ್ತಕ, ಪುಟ ೧೨೧, ವಚನ ೭೩). ಇದು ಅಕ್ಕನ ಬೆಡಗಿನ ವಚನವೇನಲ್ಲ; ಒಗಟಿನ ತಡಿಕೆಯ ಹೊದ್ದ ಕಬ್ಬಿಣದ ಕುಡಿಕೆಯೂ ಅಲ್ಲ; ತತ್ತ್ವಪದದ ಮಬ್ಬು ನೆರಳಿಗೂ ಇದು ಹೊರಳಿಲ್ಲ. ಆದರೂ, ರಾಮಾನುಜನ್ ತಮ್ಮ ಉಪೋದ್ಘಾತದಲ್ಲಿ ಬಳಸುವ (ನೋಡಿ: ಮೇಲೆ ಹೇಳಿದ ಪುಸ್ತಕ, ಪುಟ ೪೮–೫೨) ಸಂಧ್ಯಾಭಾಷಾ ಪ್ರಯೋಗ ಇಲ್ಲಿ ನಡೆದಿದೆಯೆಂದು ನಾವು ಪರಿಭಾವಿಸಬಹುದು. 'ಓದುವ' ಗಿಳಿ, 'ಪಾಡುವ' ಕೋಗಿಲೆ, 'ಆಡುವ' ನವಿಲು ಹಂಸೆ, 'ಎರಗಿ ಬರುವ' ದುಂಬಿಗಳು ಕಾಡಲ್ಲೇ ಏಕೆ, ನಮ್ಮ ಸುತ್ತಮುತ್ತಲೂ ಇಲ್ಲವೇನು? – ಗುರುತಿಸಬೇಕು ಅಷ್ಟೆ.

ಕಾವ್ಯದ ಕಮನೀಯತೆಯನ್ನು ಹೊರಹೊಮ್ಮಿಸುವ ಬಗೆಬಗೆಯ ಅಲಂಕಾರಗಳನ್ನು ಅಕ್ಕನ ವಚನಗಳಲ್ಲಿ ಸಾಹಿತ್ಯದ ಅಭ್ಯಾಸಿಗಳು ಕಾಣುತ್ತಾರೆ. ರೂಪಕಗಳು, ಉಪಮೆಗಳು ಇಲ್ಲಿ ತುಂಬಿ ತುಳುಕಾಡುತ್ತವೆ. ಸ್ವಭಾವೋಕ್ತಿ, ಅನ್ಯೋಕ್ತಿ, ವಕ್ರೋಕ್ತಿಗಳಿಗೆ ಕಡಮೆಯೇನಿಲ್ಲ. ವಾಚ್ಯಾರ್ಥದೊಂದಿಗೆ, ಸೂಚ್ಯಾರ್ಥ, ಶ್ಲೇಷೆ ಮತ್ತು ಧ್ವನಿಗಳಿಗೆ ಒಂದು ಉತ್ತಮ ಉದಾಹರಣೆಯಾಗಿ **"ಚಿಲಿಮಿಲಿಯಿಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೇ"** ಎಂದು ಆರಂಭವಾಗುವ ವಚನವನ್ನು ನಾನು ಆರಿಸಿಕೊಂಡಿದ್ದೇನೆ. ಮುಂಡರಗಿಯ ಜಗದ್ಗುರು ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳೂ ತಮ್ಮ ವ್ಯಾಖ್ಯಾನದಲ್ಲಿ ಈ ಶ್ಲೇಷಾತ್ಮಕ ಧ್ವನಿಯನ್ನೇ ಗುರುತಿಸಿದ್ದಾರೆ (ನೋಡಿ: *ಮಹಾದೇವಿಯಕ್ಕನ ವಚನ–ಚಿಂತನ*, ಪುಟ ೧೮೬, ವಚನ ೨೭೧; ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲಾ ಪ್ರಕಾಶನ, ಮೈಸೂರು, ೨೦೦೧).

ಅಕ್ಕನ ಇಂತಹ ಹಲವು ವಚನಗಳು ಉತ್ತಮ ಭಾವಗೀತೆಗಳಂತೆ, ಇನ್ನೂ ಹಲವಾರು ಅರ್ಥಗಳನ್ನು ಸ್ಫುರಿಸಿ, ನಮ್ಮ–ನಿಮ್ಮನ್ನು ಸಂತೋಷಪಡಿಸುವ ಆಕರವಾಗಿವೆ.

•

# “ಭಕ್ತಕಾಯ ಮಮ ಕಾಯ”

ಪಾರ್ವತಮ್ಮ ಚಂದ್ರಣ್ಣ

**ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು**
**ಭಕ್ತದೇಹಿಕ ದೇವ ಅನಿಮಿಷನಾಗಿ!**
**ಕೂಡಲಸಂಗಮದೇವ**
**ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು.**

ಜನರ ಹೃದಯದಲ್ಲಿ ಪ್ರೇಮ, ಭಕ್ತಿಯನ್ನು ಉಂಟುಮಾಡಲೋಸುಗ ಭಗವಂತ ಮಾನವದೇಹವನ್ನು ಧರಿಸಿ ನುಡಿಯ ಹೊನಲ ಹರಿಸಿದ. ಅದೇ ನುಡಿಲಿಂಗ, ಮಾತಿನ ಅಭಿವ್ಯಕ್ತಿಯಲ್ಲಿಯೇ ದೇವರ ದರ್ಶನ. ಇಲ್ಲಿ ಶಬ್ದದ ನಡುವೆಯೇ ಭಗವಂತ ತೋರುತ್ತಾನೆ. ಸಂಗತಿಗಳನ್ನು ಕಂಡು ಕೇಳಿ ಅನುಭವಿಸುವುದಕ್ಕೆ ಒಂದು ಮಾಧ್ಯಮ ಬೇಕು. ಅದರಲ್ಲಿ ಶಬ್ದವು ಬಹು ಮುಖ್ಯವಾದುದು. ಭಗವಂತ 'ವಾಙ್ಮನಕ್ಕಗೋಚರ' ಎಂಬ ಮಾತು ಇದೆಯಾದರೂ, ಸತ್ಯಶುದ್ಧ ಶರಣರ ಮನಸ್ಸಿನಿಂದ ಉಕ್ಕಿ ಹೊರಬಿದ್ದ ಮಾತುಗಳಲ್ಲಿ ದೇವರ ದರ್ಶನವಾಗುವುದು. ಇದೇ ಶರಣರ ಅಭಿಪ್ರಾಯ.

## “ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು”

ಸದ್ಭಕ್ತನ ಸರ್ವ ಇಂದ್ರಿಯಗಳಲ್ಲಿ ಹೊಳೆದು ಮೂಡಿದ, ಹೊರಹೊಮ್ಮಿ ತೋರುವ ದೇವರ ಸ್ವರೂಪವನ್ನು ಗುರುತಿಸಬಹುದು, ಕಾಣುವ ದೃಷ್ಟಿ ಇದ್ದರೆ! ಮೇಲಿನ ವಚನದಲ್ಲಿ ಬಸವಣ್ಣನವರು ಅಂತರಂಗದಲ್ಲಿ ಲಿಂಗದ, ಅಂದರೆ ಜ್ಞಾನರೂಪನಾದ ದೇವರ ಸ್ವರೂಪವನ್ನು ತುಂಬಿಕೊಂಡ ಭಕ್ತನ ನಿಲುವನ್ನು ಕುರಿತು ಹೇಳಿದ್ದಾರೆ. ಎರಡು ರೀತಿಯ ವಿಚಾರಗಳನ್ನು ನಾವು ಇಲ್ಲಿ ಗುರುತಿಸುತ್ತೇವೆ: ಸರ್ವಾಂಗಲಿಂಗಿಯಾದ ಸದ್ಭಕ್ತನು ಸದಾ ದೇವಭಾವದಲ್ಲಿ ಜಾಗೃತನಾಗಿ ಇರುತ್ತಾನೆ. ಅಂತಹ ಭಕ್ತನು ಆಡುವ ಮಾತುಗಳಲ್ಲಿ ಭಗವಂತನ ಅಸ್ತಿತ್ವದ ಸಮೃದ್ಧತೆಯನ್ನು ಅನುಭವಿಸಬಹುದು. ದೇವರು ನಿರಾಕಾರ, ನಿರ್ಲಿಪ್ತ, ನಿರ್ಭಾವಿ ಎಂದಿದ್ದರೂ, ಆತ ಸಾಕಾರಗೊಂಡಿರುವುದು ಭಕ್ತನ ದೇಹದ ಮೂಲಕವೇ. 'ಭಕ್ತಕಾಯ ಮಮ ಕಾಯ' ಎಂಬ ಮಾತಿದೆ. ಇದರರ್ಥ, 'ಶುದ್ಧಾಂತಃಕರಣವುಳ್ಳ ಭಕ್ತನ ದೇಹವೇ, ಆಕಾರವೇ ನನ್ನ ಸಾಕಾರ ಸ್ವರೂಪ' ಎಂದು.

ಇಂತಹ ಅವಸ್ಥೆ ಹೊಂದಬೇಕಾದರೆ ಭಕ್ತನ ಭಾವ ಹೇಗಿರಬೇಕು? ಹೊರಗೆ ತೋರಿಕೆಗಾಗಿ ಮಾಡುವ ಭಕ್ತಿ ಸಲ್ಲದು. ಭಾಷೆಯ ಭಕ್ತ, ವೇಷದ ಭಕ್ತ ಕೇವಲ ಹೊರಗೆ ತೋರುವ ಭಕ್ತ. ಅಂತರಂಗ ಮುಟ್ಟದ ಭಕ್ತಿ ಅದೇತರ ಭಕ್ತಿ? ಆ ಭಕ್ತನ ನೆಲೆ ನಿಜವೆಂತಾದೀತು? “ಹೊರಗನೆ ಕೊಯ್ದು ಹೊರಗನೆ ಪೂಜಿಸಿದವರ ಕಂಡು, ನಾಚಿದೆನಯ್ಯ ಒಳಗೊಂದು ಅನಿಮಿಷಲಿಂಗವ ಕಂಡು, ಎನ್ನ ಮನೋಪುಷ್ಪದಲ್ಲಿ ಪೂಜೆಯ ಮಾಡಿದಡೆ ಆ ನಾಚಿಕೆ ಮಾದು ನಾನು ನಿಸ್ಸಂದೇಹಿಯಾದೆನಯ್ಯಾ ಗುಹೇಶ್ವರಾ” ಎನ್ನುತ್ತಾರೆ, ಅಲ್ಲಮಪ್ರಭು. ಬಹಿರಂಗವನ್ನು ಮರೆತರೂ ಪರವಾಗಿಲ್ಲ. ಆದರೆ ಭಕ್ತ ಅಂತರಂಗಕ್ಕಿಳಿಯಬೇಕು.

ಅಂತರಂಗದ ಶುದ್ಧತೆ, ಆಂತರಿಕ ತೃಪ್ತಿಗಳೇ ಭಕ್ತನ ಜೀವನಕ್ಕೆ ಬಹು ಮುಖ್ಯವಾದುವು. ಅಂತಹ ಭಕ್ತನ ನಡೆ–ನುಡಿ, ತನು ಮನ ಭಾವ ಎಲ್ಲವೂ ಶುದ್ಧವಾಗಿರುತ್ತವೆ. ಹೀಗೆ ಸರ್ವಕ್ರಿಯೆಯಲ್ಲಿಯೂ ಶುದ್ಧನಾದ ಸದ್ಭಕ್ತನ ಕಾಯವೇ ಕೈಲಾಸವಾಗುವುದು. ಭಕ್ತನಾದವನು ಶಾಂತನಾಗಿದ್ದು, ಸದಾ ಸತ್ಯವನ್ನೇ ಹೇಳುವವನಾಗಿರಬೇಕು. ಸಕಲಜೀವದಯಾಪರನಾಗಿ, ಸಕಲ ಇಂದ್ರಿಯಗಳನ್ನೂ ತನ್ನ ವಶದಲ್ಲಿ ಇಟ್ಟುಕೊಳ್ಳಬೇಕು. ಅಲ್ಲದೆ ಶರಣರು, “ಭಕ್ತನೆಂದರೆ ಸವಿಯಾದದ್ದನ್ನು ನೀಡುವ ಬಾಳೆಹಣ್ಣು ಮತ್ತು ಮಾವಿನ ಹಣ್ಣು ಇದ್ದ ಹಾಗೆ. ಅಷ್ಟೇ ಅಲ್ಲ, ಒಳಹೊರಗೆಲ್ಲ ಎತ್ತ ಕಡೆ ಕಚ್ಚಿದರೂ ಸವಿಸವಿಯಾಗಿ ತೋರುವ ಬೆಲ್ಲದ ಅಚ್ಚಿನಂತೆ ಅವನು ಇರಬೇಕು” ಎನ್ನುತ್ತಾರೆ. ಇಂಥವನೇ ನಿಜವಾದ ಭಕ್ತ. ಈತನ ಮುಖದರ್ಪಣದಲ್ಲಿ ನಾವು ಪ್ರತ್ಯಕ್ಷ ಪರಮಾತ್ಮನನ್ನೇ ದರ್ಶಿಸಬಹುದು.

**ಭಕ್ತನ ಕಾಯದಲ್ಲಿಯೇ ಭಗವಂತನನ್ನು ಗುರುತಿಸಬಹುದು ಎಂಬ ಮಹಾನ್ ಸತ್ಯವನ್ನು ಶಿವಶರಣರು ಕಂಡುಕೊಂಡಿದ್ದರು. ಅಪೂರ್ವ ತಾತ್ತ್ವಿಕ ಹಿನ್ನೆಲೆ ಹೊಂದಿರುವ ಅದ್ಭುತ ಅನುಭಾವದ ಈ ಅಂಶವನ್ನು ಬಸವಣ್ಣನವರ ಸುಂದರವಾದ ವಚನವೊಂದರ ವಿವರಣೆಯ ಮೂಲಕ ನಿರೂಪಿಸಿರುವ ಲೇಖಕಿ ಮೈಸೂರಿನವರು.**

## "ಭಕ್ತದೇಹಿಕ ದೇವ ಅನಿಮಿಷನಾಗಿ!"

ಶಿವಭಕ್ತರ ಮುಖದರ್ಪಣದಲ್ಲಿ ಲಿಂಗವನ್ನೇ ಕಾಣಬಹುದಾದಾಗ ಭಕ್ತನ ಕಾಯ, ಶಿವನ ಕಾಯ ಒಂದೇ ಆಗಿ ಪರಿಣಮಿಸುತ್ತದೆ. ಅದನ್ನೇ 'ಭಕ್ತದೇಹಿಕ ದೇವ' ಎನ್ನುವುದು.

**ಭಕ್ತನ ಕಾಯವೇ ಶಿವನ ಕಾಯ**
**ಶಿವನ ಕಾಯವೇ ಭಕ್ತನ ಕಾಯ**
**ಶಿವಶಿವ, ಭಕ್ತ ಬೇರೆ? ಶಿವ ಬೇರೆ? ಒಂದೇ ಕಾಣಿರಣ್ಣಾ.**
**ಅದೆಂತೆದೊಡೆ ಭಕ್ತದೇಹಿಕ ದೇವ, ದೇವದೇಹಿಕ ಭಕ್ತ**
**ಎಂದು ಶ್ರುತಿಗಳು ಹೊಗಳುವ ಕಾರಣ,**
**ಭಕ್ತಂಗೂ ಶಿವಂಗೂ ಕಾಯವೊಂದೆ, ಪ್ರಾಣವೊಂದೆ,**
**ಎರಡೆಂಬ ಪರಿಭಾಷೆಯ ನುಡಿಯಲಾಗದು ಶಿವಭಕ್ತರಾದವರು,**
**ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.**

ಅನಿಮಿಷ ಯೋಗಿ ಎನ್ನುವವರು ಅಲ್ಲಮ ಪ್ರಭುದೇವರ ಗುರು. ಅವರು ಧ್ಯಾನಸ್ಥರಾಗಿ ಗುಹೆಯೊಳಗೆ ಕುಳಿತಾಗ ಪ್ರಭು ಅವರ ಕೈಯಿಂದ ಲಿಂಗವನ್ನು ಕಸಿದುಕೊಳ್ಳುತ್ತಾರೆ. ಅನಿಮಿಷ ಯೋಗಿಯ ಧ್ಯಾನಾವಸ್ಥೆಯಲ್ಲಿ ಅವರ ದೃಷ್ಟಿಯೂ ಅನಿಮಿಷ. ಅಂದರೆ ಕಣ್ಣು ಪೂರ್ತಿ ತೆರೆದಂತೆಯೂ ಅಲ್ಲ, ಪೂರ್ತಿ ಮುಚ್ಚಿರುವುದೂ ಅಲ್ಲ. ದೃಷ್ಟಿಯನ್ನು ಕೆಳಮುಖ ಮಾಡಿ ಅರೆಗಣ್ಣು ತೆರೆದು ಲಿಂಗವನ್ನು ತದೇಕ ದೃಷ್ಟಿಯಿಂದ ಈಕ್ಷಿಸುವುದು, ರೆಪ್ಪೆಯನ್ನು ಆಡಿಸದೇ ಇರುವುದು – ಇದೇ ಅನಿಮಿಷ ದೃಷ್ಟಿ. ಆಗ ಮಾತ್ರವೇ ಒಳಗಿನ 'ಪ್ರಾಣಲಿಂಗ' ಮತ್ತು ಕರಸ್ಥಲದೊಳಗಣ 'ಇಷ್ಟಲಿಂಗ'ಗಳು ಅರಿವಿನಲ್ಲಿ ಏಕೋಭಾವವಾಗಿ ಇರಲು ಸಾಧ್ಯವಾಗುತ್ತದೆ. ಅಂತರಂಗದ 'ದೇವಭಾವ', ಬಹಿರಂಗದ 'ಭಕ್ತನ ಕಾಯ' ಸಮರಸವಾಗಿ ನಿಂತ ಸ್ಥಿತಿ ಅದು. ನಿಜ ಭಕ್ತನದು ಯಾವಾಗಲೂ ಅಂತಹ ಸ್ಥಿತಿ ಎಂದು ಶಿವಶರಣರು ಹೇಳುತ್ತಾರೆ. ಅವನೇ 'ಭಕ್ತದೇಹಿಕ ದೇವ' ಎನ್ನಿಸಿಕೊಳ್ಳುತ್ತಾನೆ. ಇದರರ್ಥ, ಯಾವಾಗಲೂ ದೈವೀಭಾವದಲ್ಲಿಯೇ ಬಾಳಿಕೊಂಡಿರುವುದು. ಅಲ್ಲಿ ಪ್ರಾಪಂಚಿಕ ಭಾವನೆಗಳೆಲ್ಲ ಸತ್ತುಹೋಗಿರುತ್ತವೆ.

ಗಾಂಧೀಜಿಯ ಅಂತ್ಯ ನಮಗೆಲ್ಲ ಗೊತ್ತು. ಪ್ರಾರ್ಥನಾಸಭೆಗೆ ಬರುವಾಗ ಅವರ ಎದೆಗೆ ಗುಂಡು ನಾಟಿತು. ಪ್ರಾಣ ತೆಗೆಯುವಂತಹ ಏಟು ಬಿದ್ದಾಗಲೂ ಅವರ ಬಾಯಿಂದ 'ಹೇ ರಾಮ್' ಎನ್ನುವ ಭಗವನ್ನಾಮ ಕೇಳಿಬಂತು. ಚೀತ್ಕಾರದ ನೋವಿನ ಕೂಗು ಕೇಳಲಿಲ್ಲ. ಭಕ್ತನಲ್ಲದ ಒಬ್ಬ ಸಾಮಾನ್ಯ ಮನುಷ್ಯನಾಗಿದ್ದರೆ ಅಂತಹ ಪರಿಸ್ಥಿತಿಯಲ್ಲಿ ಎಷ್ಟೊಂದು ಚೀರಾಟ, ನೋವಿನ ನರಳಿಕೆ ಬರಬಹುದಾಗಿತ್ತೋ! ಆದರೆ ರಾಮಭಾವವನ್ನು ಅಂತರಂಗದಲ್ಲಿ ಸದಾ ಜಾಗೃತಗೊಳಿಸಿಕೊಂಡ ಗಾಂಧೀಜಿಗೆ ಅಂತ್ಯಸಮಯದಲ್ಲಿಯೂ ಅದೇ ನೆನಹು ಧ್ವನಿಯಾಗಿ ಹೊರಹೊಮ್ಮಿತು. 'ಭಕ್ತರ ಭಾವದಲ್ಲಿಪ್ಪನಲ್ಲದೆ ಮತ್ತೆಲ್ಲಿಯೂ ಇಲ್ಲ ಗುಹೇಶ್ವರ' ಎಂದು ಅಲ್ಲಮ ಪ್ರಭುದೇವರು ಹೇಳುವಂತೆ, ಭಕ್ತನ ಭಾವದಲ್ಲಿ ದೇವನು ಸದಾ ನೆಲೆಗೊಂಡಿರುತ್ತಾನೆ. ಅಂತಹ ಭಕ್ತನ ಕಾಯವು ಭಗವಂತನ ಸಾಕಾರ ರೂಪವೇ ಆಗಿರುತ್ತದೆ.

## "ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು"

ಇನ್ನು ಬಸವಣ್ಣನವರ ವಚನದ ಮೂರನೆಯ ಅಂಶವೆಂದರೆ, 'ಕೂಡಲಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿಪ್ಪನು' ಎಂಬುದು. ನಾವೆಲ್ಲ ತಿಳಿದಂತೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಅನುಭವ ಮಂಟಪವನ್ನು ಸ್ಥಾಪಿಸಿ, ಅಲ್ಲಿ ಶಿವಾನುಭವಗೋಷ್ಠಿಗೆ ಅನುವು ಮಾಡಿಕೊಟ್ಟರು. ಶರಣರೆಲ್ಲ ಒಂದೆಡೆ ಸೇರಿ ಸಿದ್ಧಾಂತ ಮಥನ ನಡೆಸುತ್ತಿದ್ದರು. ಅದರಲ್ಲಿ ಅನೇಕ ಚಿಂತನೆಗಳು ಹೊರಬೀಳುತ್ತಿದ್ದವು. ಆ ಮಾತುಗಳು ಸಂಸಾರಕ್ಕೆ ಸಂಬಂಧಿಸಿದವುಗಳಲ್ಲ. ಮಾಯೆಯ ಹಂಗಿಗೆ ಒಳಗಾದ ಮಾಯಿಕ ಮಾತುಗಳಲ್ಲ, ಅಜ್ಞಾನದ ಹೃದಯವನ್ನು ಬೆಳಗುವ ಜ್ಯೋತಿಗಳು ಅವು. ಲಿಂಗ ಕಟ್ಟಿಕೊಳ್ಳುವ ಆವಶ್ಯಕತೆ, ಕಾಯಕದ ಮಹತ್ವ, ಲಿಂಗದ ಸಾಧನೆ, ಸಮಾಜದ ಸಕಲರಲ್ಲೂ ಸಮಾನ ದೃಷ್ಟಿ ಬೆಳೆಸಿಕೊಂಡು ಎಲ್ಲ ಜೀವರ ಲೇಸನ್ನು ಬಯಸುವುದು – ಇಂಥ ಚಿಂತನೆಗಳು ಚರ್ಚೆಗೊಳಪಟ್ಟು ಮಾತುಗಳ ಮಂಥನ ನಡೆದಾಗ, ಅಲ್ಲಿ ಜ್ಞಾನದ ಬೆಳಗು ಹೊಮ್ಮುತ್ತಿತ್ತು. ಅನೇಕರು ಆ ಬೆಳಗನ್ನು ಅನುಭವಿಸಿ, ತಮ್ಮ ಜೀವನದಲ್ಲಿ ಅದನ್ನು ಅನುಷ್ಠಾನಕ್ಕೆ ತಂದು ಪರಮಾನಂದವನ್ನೂ, ಪರಮಶಾಂತಿಯನ್ನೂ ಪಡೆಯುತ್ತಿದ್ದರು; ಶರಣರಾಡುವ ಒಂದೇ ಒಂದು ಮಾತು ಕೇಳಿದರೂ ಸಾಕು ಎಂದು ಬಯಸಿ ಅದಕ್ಕಾಗಿ ಹಂಬಲಿಸುತ್ತಿದ್ದರು.